# ಪ್ರೇಮದ ಮಾರ್ಗ

ನಿಷಿದ್ಧ ಹಣ್ಣನ್ನು ತಿನ್ನುವ ಪ್ರಲೋಭನೆ ನನ್ನ ಕೊರಳಿನ ಸುತ್ತ ವಿಧಿಯ ಉರುಲನ್ನು ಕಟ್ಟಿದೆ.
ಹಿಂದೊಮ್ಮೆ, ನನ್ನ ಒಡೆಯನ ತೋಟದಲ್ಲಿ ನಾನು ಬುಲ್‌ಬುಲ್ ಹಕ್ಕಿಯಂತೆ ಹಾಡುತ್ತಿದ್ದೆ;
ಆದರೀಗ, ಮರ್ತ್ಯ ಪಂಜರದಲ್ಲಿ ಸೆರೆಯಾಗಿ, ನೋವಿನಿಂದ ಪರದಾಡುತ್ತಿದ್ದೇನೆ.
ನೀನು ಪ್ರೀತಿಸುವ ಬೇರೆಲ್ಲವನ್ನೂ ನಿನ್ನ ಹೃದಯದಿಂದ ಹೊರಹಾಕು,
ಮತ್ತು, ನಿನ್ನನ್ನು ಮರಳಿ ಕರೆಸಿಕೊಳ್ಳಲು ಆ ಒಡೆಯನ ಅನುಗ್ರಹಕ್ಕಾಗಿ ಪ್ರಾರ್ಥಿಸು.

## ನನ್ನ ಒಡೆಯನೆಲ್ಲಿದ್ದಾನೆ?

ನನ್ನ ಒಡೆಯನು ಹತ್ತಿರದಲ್ಲಿಯೇ ಇದ್ದಾನೆ, ಆದರೆ ದೂರದಲ್ಲಿರುವಂತೆ ಭಾಸವಾಗುತ್ತದೆ;
ಅವನನ್ನು ಹೇಗೆ ಹುಡುಕಬೇಕೆಂದು ನಿನಗೆ ಗೊತ್ತಿಲ್ಲ.
ಹೊರಗೆ ಹುಡುಕುವುದರಿಂದ ನೀನೇನೂ ಸಾಧಿಸಲಾರೆ, ನಿನ್ನೊಳಗೇ ಅವನು ಕುಳಿತಿದ್ದಾನೆ.
ನೀನು ಕೊಳಕೆಲ್ಲವನ್ನೂ ಹೊರಹಾಕಿದಾಗ ಎಲ್ಲಾ ಮುಸುಕುಗಳೂ ಮರೆಯಾಗುತ್ತವೆ, ಮತ್ತು
ಕನ್ನಡಿಯಂತೆ ನಿನ್ನ ಹೃದಯವು ಹೊಳೆಯುತ್ತದೆ.

ವ್ಯಥಿಸುತ್ತಲೇ ನಾನು ಅಲೆದಾಡುತ್ತೇನೆ
ವ್ಯಥಿಸುತ್ತಲೇ ನಾನು ಅಲೆದಾಡುತ್ತೇನೆ ಕೋಗಿಲೆಯಂತೆ,
ನನ್ನ ದಿನಗಳು ವ್ಯರ್ಥವಾಗದಿರಲೆಂದು ಬೇಡುತ್ತಾ;
ಹೇಳು ಕೋಗಿಲೆ! ಮಳೆಗಾಲವು ಕಾಲಿಟ್ಟಿದೆ,
ಮಳೆಯನ್ನು ಸುರಿಸುತ್ತಾನೆಯೇ ಆ ದೇವರು?

## ಒಡೆಯನ ಸೃಷ್ಟಿ ಕಾರ್ಯವು ಮುಗಿದಂದಿನಿಂದ

ಒಡೆಯನ ಸೃಷ್ಟಿ ಕಾರ್ಯವು ಮುಗಿದಂದಿನಿಂದ, ನನ್ನ ನಿಜವಾದ ಮನೆಗೆ ಹಿಂತಿರುಗುತ್ತೇನೆಂದು ಮಾತುಕೊಟ್ಟಿದ್ದೇನೆ;
ಒಡೆಯನೊಡನೆ ಒಂದಾಗಬೇಕೆಂಬ ನನ್ನ ಮಹದಾಕಾಂಕ್ಷೆಯನ್ನು ತಿಳಿದವರು ನನ್ನ ಹತಾಶ ಸ್ಥಿತಿಯನ್ನು ಅರ್ಥಮಾಡಿಕೊಳ್ಳಬಲ್ಲರು.
ಅವನನ್ನು ಹಿಂಬಾಲಿಸುವಾಗ ವಿಧಿ ನೀಡುವ ಕಷ್ಟ–ಕೋಟಲೆಗಳನ್ನು ಸಹಿಸುತ್ತೇನೆ ನಾನು,
ಪ್ರೇಮ–ನಾವೆಯ ಮೇಲೆ ಅವನೆಡೆಗೆ ಸಾಗುತ್ತಿರುವಾಗ;
ಬದುಕಿರುವಾಗ ಯಾರೂ ಕಾಣಲಿಲ್ಲ ಒಡೆಯನನ್ನು, ಓ ಬಹು!
ಯಾರು ಬದುಕಿದ್ದೂ ಸಾಯುತ್ತಾರೋ ಅವರು ಮಾತ್ರ ಒಡೆಯನನ್ನು
ನೋಡಬಲ್ಲರು.

## ಪ್ರೇಮಮಾರ್ಗ ನಿಮ್ಮನ್ನು ಧರ್ಮದಿಂದ ದೂರಮಾಡಬಲ್ಲದು

ಪ್ರೇಮಮಾರ್ಗ ತುಂಬಾ ಕುತೂಹಲಕರ, ಅದು ನಿಮ್ಮನ್ನು ಧರ್ಮದಿಂದ ದೂರಮಾಡಬಲ್ಲದು;
ಪ್ರೇಮಗ್ರಸ್ತರಾದರೆ, ಪುರೋಹಿತರೂ ತಮ್ಮ ಪೌರೋಹಿತ್ಯವನ್ನು ತ್ಯಜಿಸುತ್ತಾರೆ.
ಪ್ರೇಮದ ವಿರುದ್ಧ ಅಜ್ಞಾನಿಗಳು ಉಪದೇಶಿಸುತ್ತಾರೆ, ಆದರೆ ಪ್ರೇಮಿಗಳು ಅದೆಲ್ಲವನ್ನೂ ತಿರಸ್ಕರಿಸುತ್ತಾರೆ;